ಕಡೆ ಹೋಗಲು ರಸ್ತೆ ಬೇಕಾಗುತ್ತದೆ. ಆದುದರಿಂದ ಎನ್‌ಕ್ರೋಚ್‌ಮೆಂಟ್ ಮಾಡಿದ ಜಾಗವನ್ನು ವಾಪಸ್ಸು ಪಡೆದುಕೊಳ್ಳುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಖಾಸಗೀ ಜಮೀನಿನಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದ್ದರೆ ಅದನ್ನು ಅಕ್ವಿಸಿಷನ್ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಅದು ಸರ್ಕಾರಿ ಜಮೀನು ಆಗಿದ್ದರೆ ತೊಂದರೆ ಇಲ್ಲ. ಎಲ್ಲಾದರೂ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವ ನಿರ್ದಿಷ್ಟ ಜಾಗವನ್ನು ಮಾನ್ಯ ಸದಸ್ಯರು ಹೇಳಿದರೆ ಆ ಬಗ್ಗೆ ಸರ್ಕಾರ ಖಂಡಿತ ಕ್ರಮ ತೆಗೆದುಕೊಳ್ಳುತ್ತದೆ.

Estimate for the Nagegowda's Byala Tank of Turuvekere Taluk.

667. SRI K. H. RAMAKRISHNAIAH (Turuvekere).—Will the Minister for Transport and Minor Irrigation be pleased to state:—

(a) whether estimate has been prepared for Nagegowda's Byala Tank of Turuvekere Taluk, if so when ;

(b) whether sanction has been accorded for construction of tank ;

(c) the difficulties faced by the Government to commence the work ?

SRI M.M.J. SADYOJATHA.—(Minister for Transport and Minor Irrigation).—

(a) Estimate had been prepared in the year 1980-81.

(b) No.

(c) This does not arise in view of replies furnished above.

ಶ್ರೀ ಕೆ. ಹೆಚ್. ರಾಮಕೃಷ್ಣಯ್ಯ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ''ಅಂದಾಜು ತಯಾರಿಸಲಾಗಿತ್ತು'' ಎಂದು ಹೇಳಿದ್ದಾರೆ. ನಾನು ಕೇಳಿದ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರ ಕೊಟ್ಟಿಲ್ಲ. ೧೯೮೦ರಲ್ಲಿ ಇದರ ಅಂದಾಜು ತಯಾರು ಮಾಡಿದ್ದು ೧೯೮೨ನೇ ಇಸವಿವರೆಗೆ ಸದರಿ ಕೆಲಸ ಇನ್ನೂ ಕಾರ್ಯಗತವಾಗಿಲ್ಲ. ೧೯೮೧-೮೨ನೇ ಸಾಲಿನಲ್ಲಿ ಇದಕ್ಕೆ ಮಂಜೂರಾತಿ ಕೊಡದೇ ಇರುವುದಕ್ಕೆ ವಿಶೇಷ ಕಾರಣ ಏನು ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ೧೯೮೦ರಿಂದ ಇಲ್ಲಿಯವರೆಗೆ ಅಂದಾಜು ತಯಾರಾಗಿದೆ. ಆದರೆ ಕೆಳಭಾಗದಲ್ಲಿ ಹಾಗೂ ಮೇಲ್ಭಾಗದಲ್ಲಿ ಇರುವ ರೈತರು ಕೆಲವು ಅಬ್ಜೆಕ್ಷನ್ ಹಾಕಿರುವುದರಿಂದ ಅದಕ್ಕೆ ಪೂರ್ಣವಾದ ಇಲಾಖಾ ತನಿಖೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ್ದರಿಂದ ಇದು ತಡವಾಯಿತು. ಈಗ ಅಂದಾಜು ತಯಾರಾಗಿದೆ.

ಶ್ರೀ ಕೆ.ಹೆಚ್. ರಾಮಕೃಷ್ಣಯ್ಯ.—ಯಾರ ಜಮೀನು ಮುಳುಗಡೆ ಆಗುತ್ತದೆಯೋ ಆ ಜಾಗದ ಜನರು ನಮಗೆ ಯಾವ ಪರಿಹಾರವೂ ಬೇಕಾಗಿಲ್ಲ, ಪುಕ್ಕಟೆಯಾಗಿ ಜಮೀನನ್ನು ಸರ್ಕಾರಕ್ಕೆ ಬರೆದು ಕೊಡುತ್ತೇವೆಂದು ಹೇಳಿ ಜಮೀನನ್ನು ರಿಜಿಸ್ಟರ್ ಮಾಡಿಕೊಟ್ಟಿದ್ದಾರೆ. ಆದರೂ ಕೂಡ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣ ಏನು ?

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರಕ್ಕೇನೂ ಪೂರ್ಣವಾಗಿ ಅವರು ಆ ರೀತಿ ಬರೆದುಕೊಟ್ಟಿಲ್ಲ. ಕ್ಯಾಚ್‌ಮೆಂಟ್ ಏರಿಯಾದಲ್ಲಿ ಬರತಕ್ಕಂತಹ ಕೆಲವು ಜನರು ಅಬ್ಜೆಕ್ಷನ್ ಹಾಕಿದ್ದಾರೆ. ಆ ಬಗ್ಗೆ ಅಲ್ಲಿಗೆ ಮುಖ್ಯ ಇಂಜಿನಿಯರ್ ಅವರು ಹೋಗಿ ವಿಚಾರ ವಿನಿಮಯ ಮಾಡಿ ಅಂತಿಮ ತೀರ್ಮಾನವನ್ನು ಕೊಟ್ಟಿದ್ದಾರೆ. ೧೯೮೨-೮೩ರಲ್ಲಿ ಇದನ್ನು ಮಂಜೂರು ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಕೆ.ಹೆಚ್. ರಾಮಕೃಷ್ಣಯ್ಯ.—೧೯೮೧-೮೨ರಲ್ಲಿ ೪ ಲಕ್ಷ ೨೦ ಸಾವಿರಕ್ಕೆ ಅಂದಾಜು ತಯಾರಿಸಲಾಗಿತ್ತು. ಇದರಿಂದ ಒಂದು ಎಕರೆಗೆ ೨ ೭೪೫ ರೂ. ಆದಂತಾಯಿತು. ಪುನಃ ೧೯೮೨-೮೩ರಲ್ಲಿ ಎಸ್.ಆರ್. ರೇಟ್ ಜಾಸ್ತಿ ಆಗಿದೆ. ಆದ್ದರಿಂದ ಈ ಕೆಲಸವನ್ನು ಸರ್ಕಾರ ಮಾಡಿ ಮುಗಿಸುವ ಬಗ್ಗೆ ಭರವಸೆ ಕೊಡುತ್ತದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ಎಕರೆವಾರು ೨,೭೪೫ ರೂಪಾಯಿ ಇದೆ. ಒಂದು ಅಥವಾ ಎರಡು ವರ್ಷ ಹೋದರೆ ಅದು ಜಾಸ್ತಿ ಆಗುತ್ತದೆ, ಈ ಕೆಲಸ ಆವಶ್ಯಕವಾಗಿ ಮಾಡಬೇಕೆಂದು ಸರ್ಕಾರದಲ್ಲಿ ಮನಸ್ಸು ಇರುವುದರಿಂದ ೧೯೮೨-೮೩ರಲ್ಲಿ ಇದನ್ನು ಮಂಜೂರು ಮಾಡುವುದಕ್ಕೆ ಸರ್ಕಾರ ಉದ್ದೇಶಿಸಿದೆ.

ಶ್ರೀ ವಿ.ಎಲ್. ಶಿವಪ್ಪ.—ಯಾರೋ ಕೆಲವರು ಪರಿಶಿಷ್ಟ ಜಾತಿಯವರು ಜಾಗವನ್ನು ಪಡೆದು ಕೊಂಡು ಇಲ್ಲಿನ ಕೆಲಸಗಳಿಗೆ ತಡೆಯೊಡ್ಡುವ ರಾಜಕಾರಣ ಮಾಡುತ್ತಿರುವುದು ನಿಜವೇ ? ಇಂತಹ ಸಂದರ್ಭ ಇರುವಾಗ ಈ ಕೆರೆ ಕಟ್ಟಡ ೧೯೮೨-೮೩ರಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಇದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲಿ ಕೆಲವಾರು ಅಬ್ಜಕ್ಷನ್ಸ್ ಬಂದಿದ್ದುದು ನಿಜ. ಅವು ಬಂದ ಮೇಲೆ ಮುಖ್ಯ ಇಂಜಿನಿಯರ್ ಅವರು ಅಲ್ಲಿಗೆ ಹೋಗಿ ಪೂರ್ಣ ಪರಿಶೀಲನೆ ಮಾಡಿ ಖುದ್ದಾಗಿ ನೋಡಿಕೊಂಡು ಬಂದಿದ್ದಾರೆ. ಇದರ ಅಂದಾಜು ೪ ಲಕ್ಷದ ೨೫ ಸಾವಿರ ರೂಪಾಯಿ ಆಗಿದೆ. ೧೯೮೨-೮೩ರಲ್ಲಿ ಇದನ್ನು ಮಂಜೂರು ಮಾಡುವ ನಿಲುವನ್ನು ಸರ್ಕಾರ ತೆಗೆದುಕೊಂಡಿದೆಯೆಂದು ನಾನು ಈಗಾಗಲೇ ಹೇಳಿದ್ದೇನೆ.

Constitution of Committee on Welfare of Backward Classes and Minorities.

699. SRI M. GANGANNA (Kustagi).—Will the Minister for Social Welfare and Backward Classes be pleased to state.—

(a) whether the matter of constitution of a Committee on Welfare of Backward Classes and Minorities is under consideration of the Government as per the rules of Procedure and Conduct of Business in the Karnataka Legislature on the lines of Committee on the Welfare of Scheduled Castes and Schedule Tribes :

(b) if so, the stage at which it stands ?

SRI P. VENKATARAMANA (Minister for Social Welfare and Backward Classes).—

(a) Yes.

(b) The matter is under consideration.

ಶ್ರೀ ಎಂ. ಗಂಗಣ್ಣ.—ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಮಿತಿ ರೀತಿಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತ ಕಲ್ಯಾಣ ಸಮಿತಿಯನ್ನು ರಚಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಈ ಬಗ್ಗೆ ಕಳೆದ ಒಂದು ವರ್ಷದಿಂದ ಒತ್ತಾಯ ಮಾಡುತ್ತಿದ್ದೇವೆ. ಸರ್ಕಾರ ಈ ಕಡೆ ಗಮನಹರಿಸಿಲ್ಲ. ಈ ಬಗ್ಗೆ ಸರ್ಕಾರ ಆಸಕ್ತಿ ಹೊಂದಿಲ್ಲ ಎಂದು ಕಾಣುತ್ತದೆ. ಆದ್ದರಿಂದ, ಈ ಸದನ ಮುಗಿಯುವುದರೊಳಗೆ ಸಮಿತಿಯನ್ನು ರಚಿಸಲಾಗುತ್ತದೆಯೇ?

ಶ್ರೀ ಪಿ. ವೆಂಕಟರಮಣ.—ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಮಿತಿಯನ್ನು ರಚಿಸುವ ವಿಚಾರದಲ್ಲಿ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ. ಆ ಬಗ್ಗೆ ನಿಯಮಾವಳಿ ರಚಿಸಬೇಕೆಂದು ಮಾನ್ಯ ಕಾನೂನು ಸಚಿವರಿಗೆ ತಿಳಿಸಲಾಗಿದ್ದು ಅದು ಬಂದಮೇಲೆ ಸಭೆಯ ಮುಂದೆ ಇಟ್ಟು ಅಂಗೀಕಾರ ತೆಗೆದುಕೊಳ್ಳಬೇಕಾಗುತ್ತದೆ. ಆಗ ಅದು ಕಾರ್ಯಗತವಾಗುತ್ತದೆ.